ಭಾರತೀಯರಿಗೆ ಕೊಡುವುದಿಲ್ಲ. ಆ ಕಾರಣಕ್ಕಾಗಿ ಭಾರತಕ್ಕೆ ಅವನು ಬರಲೇಬೇಕಾಗಿತ್ತು. ಅಪ್ಪನ ಆರೋಗ್ಯ ಸರಿಯಿಲ್ಲವೆಂಬ ನಾಟಕ ಹೂಡಿ ಬಂದಿದ್ದ. ವೀಸಾ ಸಿಕ್ಕ ತಕ್ಷಣ ಅಮೆರಿಕಾಕ್ಕೆ ಹಾರಿ, ನನಗೊಂದು ಇ–ಮೇಲ್ ಮೂಲಕ ರಾಜೀನಾಮೆ ಕಳುಹಿಸುವ ಹುನ್ನಾರ ಅವನದಾಗಿತ್ತು. ಆದರೆ ಅನಿರೀಕ್ಷಿತವಾಗಿ ಅಮೆರಿಕನ್ ಎಂಬೆಸಿ ನಡೆಸಿದ ಆಕ್ರಮಣಕ್ಕೆ ಸಿಕ್ಕಿ ಬಿದ್ದು, ಜೈಲಿನಲ್ಲಿ ಕಂಬಿ ಎಣಿಸುವಂತಾಗಿತ್ತು. ಮತ್ತೆ ನನ್ನನ್ನು ಸಂಪರ್ಕಿಸಲು ಸಂಕೋಚ ಅಡ್ಡಿ ಮಾಡಿರಬೇಕು.

ಕೊಯಂಬತ್ತೂರಿನ ಸೆಂಟ್ರಲ್ ಜೈಲಿಗೆ ಹೋಗಿ ಒಮ್ಮೆ ವೆಂಕಯ್ಯನನ್ನು ಮಾತಾಡಿಸಿಕೊಂಡು ಬರೋಣ ಎಂದು ತುಂಬಾ ಸಲ ಅಂದುಕೊಂಡೆ. ಆದರೆ ಜಾಣತನವಿದ್ದೂ ಅನೈತಿಕತೆಗೆ ತೆರೆದುಕೊಳ್ಳುವ ಸ್ವಭಾವ ನನಗೆ ಒಗ್ಗಲಾರದ್ದು. ಆದ್ದರಿಂದಲೇ ಬೇಡವೆಂದು ನಿರ್ಧರಿಸಿದೆ. ಪದವಿ ಪ್ರಮಾಣಪತ್ರವನ್ನು ನಕಲು ಮಾಡುವುದು ಘೋರ ಮೋಸವೇ ಆಗಿದೆ. ಆದ್ದರಿಂದ ಅವನಿಗೆ ಬೇಲ್ ಕೂಡಾ ಸುಲಭವಾಗಿ ಸಿಕ್ಕಿರಲಿಕ್ಕಿಲ್ಲ ಎಂದು ಅನ್ನಿಸಿತು.

ನಿಯಮಗಳನ್ನು ಮುರಿಯುವ ಆಸಕ್ತಿಯನ್ನು ಅವನು ಮತ್ತೆ ಮತ್ತೆ ತೋರಿಸಿಕೊಳ್ಳುತ್ತಿದ್ದ. ಅದರಲ್ಲಿ ಸಾಕಷ್ಟು ಯಶಸ್ವಿಯೂ ಆಗುತ್ತಿದ್ದ. ಆದರೆ ಈ ಬಾರಿ ಸಿಕ್ಕಿ ಬಿದ್ದಿದ್ದ. ಹದಿನೈದು ಜನರ ಗ್ರೂಪ್ ಫೋಟೊದ ಮಧ್ಯದಲ್ಲಿದ್ದ ಸೂಟು ಬೂಟು ಟೈ ಹಾಕಿಕೊಂಡ ವೆಂಕಯ್ಯನ ಚಿತ್ರ, ಬಹುದಿನಗಳ ಕಾಲ ನನ್ನನ್ನು ಕಾಡುತ್ತಿತ್ತು. ಅವನ ವಿಶೇಷ ಜಾಣತನ, ಉತ್ಸಾಹ, ಸಾಹಸಮಯ ವ್ಯಕ್ತಿತ್ವವನ್ನು ಕಂಡಿದ್ದ ನನಗೆ, ಯಾಕೋ ಎಲ್ಲೋ ಏನೋ ಸರಿಯಿಲ್ಲ ಎಂದು ಕಸಿವಿಸಿಯಾಗುತ್ತಿತ್ತು.

## ವಸುಧೇಂದ್ರ

ಕತೆ, ಕಾದಂಬರಿ, ಪ್ರಬಂಧ ಹಾಗೂ ಅನುವಾದಿತ ಪುಸ್ತಕಗಳನ್ನು ಪ್ರಕಟಿಸಿರುವ ಈ ಲೇಖಕ ಬಳ್ಳಾರಿ ಜಿಲ್ಲೆಯ ಸಂಡೂರಿನವರು. ಸಂಡೂರಿನಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸ ಪಡೆದಿದ್ದಾರೆ. ಸೂರತ್ಕಲ್‌ನ NITK ಕಾಲೇಜಿನಿಂದ ಎಂಜಿನಿಯರಿಂಗ್ ಮತ್ತು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(IISc)ಯಿಂದ ಎಂ.ಇ. ಪದವಿ ಪಡೆದಿದ್ದಾರೆ. 20 ವರ್ಷಗಳ ಕಾಲ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡಿ, ಈಗ ಓದು ಮತ್ತು ಬರಹಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಅವರ ಕಥಾಸಂಗ್ರಹಗಳು: 'ಮನೀಷೆ', 'ಯುಗಾದಿ', 'ಚೇಳು', 'ಹಂಪಿ ಎಕ್ಸ್‌ಪ್ರೆಸ್', 'ಮೋಹನಸ್ವಾಮಿ'. ಲಲಿತ ಪ್ರಬಂಧ ಸಂಕಲನಗಳು: 'ಕೋತಿಗಳು', 'ರಕ್ಷಕ ಅನಾಥ', 'ವರ್ಣಮಯ', 'ನಮ್ಮಮ್ಮ ಅಂದ್ರೆ ನಂಗಿಷ್ಟ'. ಕಾದಂಬರಿ: 'ಹರಿಚಿತ್ತ ಸತ್ಯ'. ಬ್ರೈಲ್‌ಲಿಪಿಯಲ್ಲಿ 'ದೃಶ್ಯ ಕಾವ್ಯ'(ಆಯ್ದ ಸುಲಲಿತ ಪ್ರಬಂಧಗಳ ಸಂಕಲನ) ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.